**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 995/2024</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

**-: ವಿರುದ್ಧ :-**

**<u>ಆರೋಪಿಃ</u>**

1. ಶ್ರೀ ಯೋಗೀಶ.ಸಿ.ಎಂ,
ಬಿನ್ ಶ್ರೀ ಮಲ್ಲೇಶಪ್ಪ,
29 ವರ್ಷಗಳು,

2. ಶ್ರೀ ಮಲ್ಲೇಶಪ್ಪ,
ಬಿನ್ ಶ್ರೀ ವೀರಭದ್ರಪ್ಪ,
56 ವರ್ಷ,

ಇಬ್ಬರ ವಾಸಃ ಚಿಕನಲ್ಲೂರು ಗ್ರಾಮ,
ಕಡೂರು ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 29.03.2024 ರಂದು ರಾತ್ರಿ 9.45 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಚಿಣ್ಣಾಪುರ ಗ್ರಾಮದ ಸರ್ವೇ ನಂಬರ್ 47/4 ರ ಜಮೀನಿನಲ್ಲಿ ಚಾಸಾ-1/ ಶ್ರೀ ಪವನ್ ಕುಮಾರ್ ರವರು ಟ್ರ್ಯಾಕ್ಟರ್ ನಲ್ಲಿ ಬೇಸಾಯ ಹೊಡೆಯುವಾಗ, ಆರೋಪಿಗಳಾದ ನಿಮ್ಮ ಜಮೀನಿನಲ್ಲಿ ಕುರಿ ಮಂದೆ ನಿಲ್ಲಿಸಿದ್ದು ಕುರಿಮರಿಗಳಿಗೆ ಮೇಯಿಸಿದ ಕಸಕಡ್ಡಿಗಳನ್ನು ಚಾಸಾ-1 ರವರ ಜಮೀನಿಗೆ ಹಾಕಿದ್ದು ಈ ವಿಚಾರವಾಗಿ, 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧವನ್ನು ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿನ ಹತ್ತಿರ ಬಂದವರೆ ಏಕಾಏಕಿ ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, 1 ಮತ್ತು

2 ನೆ ಆರೋಪಿಗಳಾದ ನೀವು ಚಾಸಾ–1 ರವರನು ಹಿಡಿದುಕೊಂಡು ಕೈಗಳಿಂದ ಹೊಡೆದು ಕೆಳಗೆ ಬೀಳಿಸಿದ್ದು ಹಾಗೂ ನಿಮ್ಮಲ್ಲಿ 1 ನೇ ಆರೋಪಿ ಚಾಸಾ–1 ರವರ ಬಲಕಾಲಿನ ಪಾದವನ್ನು ಕೈಯಿಂದ ತಿರುಚಿ, ಬಲಮೊಣಕಾಲಿಗೆ ಮತ್ತು ಕಾಲು ಬೆರಳಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ನೇ ಆರೋಪಿ ಕುಡುಗೋಲಿನ ಮರದ ಹಿಡಿಯಿಂದ ಚಾಸಾ–1 ರವರ ಮೂಗಿಗೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ಚಾಸಾ–1 ರವರು ತಪ್ಪಿಸಿಕೊಳ್ಳಲು ಹೋದಾಗ ನಿಮ್ಮಲ್ಲಿ 2 ನೇ ಆರೋಪಿ ಅವರನ್ನು ಅಡ್ಡಗಟ್ಟಿ ನಿಲ್ಲಿಸಿರುತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 2 ನೇ ಆರೋಪಿ ಚಾಸಾ–1 ರವರಿಗೆ ಸೂಳೆಮಗನೇ ಎಂದು ಅವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 2 ನೇ ಆರೋಪಿ ಚಾಸಾ-1 ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ಮತ್ತು 2 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ಮತ್ತು 2 ನೇ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 1: Yes

ಆರೋಪಿ 2: Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಗಳ ಉತ್ತರಃ

ಆರೋಪಿ 1: Pleaded not guilty and claimed to be tried

ಆರೋಪಿ 2: Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ : 25.04.2025

ಸಹಿ/-

(ರಾಹುಲ್ ಶೆಟ್ಟಿಗಾರ್)

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ

ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿತರ ಸಹಿಃ